# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 877(924)

ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 21-09-2022.

ಉತ್ತರಿಸುವ ಸಚಿವರು : ಮಾನ್ಯ ಮುಜರಾಯಿ ಹಜ್ ಮತ್ತು ವಕ್ಫ್ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ರಾಜ್ಯದಲ್ಲಿ ಎಷ್ಟು ಮದರಸಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ; ಮದರಸ ಮಂಡಳಿ ಪ್ರಾರಂಭಿಸುವ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು) | ಅಲ್ಪಸಂಖ್ಯಾತರ ನಿರ್ದೇಶನಾಲಯ ವತಿಯಿಂದ ರಾಜ್ಯದಲ್ಲಿನ ವಕ್ಫ್ ಸಂಸ್ಥೆಗಳಿಂದ ನಡೆಸಲಾಗುತ್ತಿರುವ ಮದರಸಗಳನ್ನು ಆಧುನೀಕರಣಗೊಳಿಸಲು, ಔಪಚಾರಿಕ ಶಿಕ್ಷಣ ಹಾಗೂ ಗಣಕಯಂತ್ರ ಶಿಕ್ಷಣ ನೀಡಲು ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ನೀರು, ಶೌಚಾಲಯ, ವಸತಿ ಸೌಲಭ್ಯಗಳ ಕೊರತೆ ಪೀಠೋಪಕರಣಗಳ, ಗಣಕಯಂತ್ರ ಮತ್ತು ಗ್ರಂಥಾಲಯದ ಸೌಲಭ್ಯಗಳನ್ನು ಒದಗಿಸಲು ಒಂದು ಸಂಸ್ಥೆಗೆ ಒಂದು ಬಾರಿಗೆ ಮಾತ್ರ ಗರಿಷ್ಠ ರೂ 5.00 ಲಕ್ಷಗಳ ಅನುದಾನವನ್ನು ನೀಡಲಾಗುತ್ತಿದೆ.<br>ಅದರಂತೆ, ಪ್ರಸಕ್ತ ಸಾಲಿನಲ್ಲಿ ಈವರೆಗೆ 80 ವಕ್ಫ್ ಮದರಸಗಳಿಗೆ ಅನುದಾನ ನೀಡಲಾಗುತ್ತಿದೆ.<br>ಮದರಸ ಮಂಡಳಿ ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಆ. | ಮದರಸದ ಶಿಕ್ಷಕರಿಗೆ ಇರುವ ಅರ್ಹತೆಗಳೇನು; ಮದರಸಗಳನ್ನು ಪ್ರಾರಂಭಿಸಲು ಯಾರು ಅನುಮತಿ ನೀಡುತ್ತಾರೆ; | ಮದರಸ ಶಿಕ್ಷಣದಲ್ಲಿ ಆಲಿಮ್ ಪದವಿ ಹೊಂದಿರುವವರು ಶಿಕ್ಷಕರಾಗಿರುತ್ತಾರೆ. ಮದರಸಗಳು ಸ್ವಾಯತ್ತ ಸಂಸ್ಥೆಗಳಾಗಿರುವುದರಿಂದ ಮದರಸ ಪ್ರಾರಂಭಿಸಲು ಅನುಮತಿ ಪಡೆಯಬೇಕೆಂಬ ಯಾವುದೇ ಮಾರ್ಗಸೂಚಿಗಳು ಇರುವುದಿಲ್ಲ. |
| ಇ. | ಮದರಸಗಳಲ್ಲಿ ಕನ್ನಡ ಕಡ್ಡಾಯ ಕುರಿತು ಸರ್ಕಾರದ ನಿಲುವೇನು; ಮದರಸಗಳಿಂದ ಸರ್ಕಾರಕ್ಕೆ ಎಷ್ಟು ಮೊತ್ತದ ಆದಾಯ ಬರುತ್ತಿದೆ; (ವಿವರ ನೀಡುವುದು) | ವಸತಿ ಸಹಿತ ಮದರಸಾಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಭೋದಿಸಲಾಗುತ್ತಿದೆ.<br>ಮದರಸ ಮಂಡಳಿ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದ್ದು, ಮಂಡಳಿಯು ರಚನೆಯಾದ ನಂತರ ಈ ಬಗ್ಗೆ ಮಂಡಳಿಯ ಹಂತದಲ್ಲಿ ಪರಿಶೀಲಿಸಲಾಗುವುದು.<br>ಮದರಸಾಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುತ್ತಿಲ್ಲ. |